**1 ನೇ ಹೆಚ್ಚುವರಿ ವ್ಯವಹಾರ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಸಾಗರ**

**ಸಿ.ಸಿ ಸಂಖ್ಯೆಃ 1207-2022**

**ಸಿ.ಡಬ್ಲ್ಯೂ -7, ಪಿ.ಡಬ್ಲ್ಯೂ -8**

| | | |
|---|---|---|
| ಸಾಕ್ಷಿದಾರರ ಹೆಸರು | : | ನಾರಾಯಣ ಸ್ವಾಮಿ |
| ತಂದೆಯ ಹೆಸರು | : | ರಾಮಯ್ಯ |
| ವಯಸ್ಸು | : | 76 ವರ್ಷ |
| ಉದ್ಯೋಗ | : | ವ್ಯವಸಾಯ |
| ವಾಸ | : | ಮಂಕಳಲೆ ಗ್ರಾಮ, ಸಾಗರ ತಾಲ್ಲೂಕು. |

**ಪ್ರಮಾಣೀಕರಿಸಿದ ದಿನಾಂಕ :15.06.2026.**

**ಮುಖ್ಯ ವಿಚಾರಣೆ : ಸಹಾಯಕ ಸರ್ಕಾರಿ ಅಭಿಯೋಜಕರಿಂದ**

1. ಈಗ ನಾನು ನೋಡುತ್ತಿರುವ ದಾಖಲೆಯ ಮೇಲಿನ ಸಹಿ ನನ್ನದೇ ಆಗಿರುತ್ತದೆ. ದಿಃ21.05.2022 ರಂದು ಪಂಚನಾಮೆಗೆಂದು ಪೊಲೀಸರು ಬಂದಿದ್ದರು, ಸರ್ವೇ ಸಂಖ್ಯೆ 120 ಮತ್ತು 121 ಕ್ಕೆ ಹೋದೆ, ಸ್ಥಳದಲ್ಲಿ ಚಾಸ 3 ಇದ್ದರು. ಸ್ಥಳವನ್ನು ಚಾಸ 3 ತೋರಿಸಿದರು. ಪೊಲೀಸರು ಬರೆದ ಬರವಣಿಗೆಗೆ ನಾನು ಸಹಿ ಮಾಡಿದೆ. ಪಂಚನಾಮೆಯನ್ನು ಪೊಲೀಸರು ಬೆಳಿಗ್ಗೆ 10.30 ರಿಂದ 11.30 ರವರೆಗೆ ಜರುಗಿಸಿರುತ್ತಾರೆ. ಪೊಲೀಸರು ನನ್ನ ಸಮಕ್ಷಮ ಬಡಿಗೆಯನ್ನು ಜಪ್ತುಪಡಿಸಿಕೊಂಡರು. ಬಡಿಗೆಯನ್ನು ನೋಡಿದರೆ ಗುರುತಿಸುತ್ತೇನೆ. ಈಗ ನಾನು ನೋಡುತ್ತಿರುವ ಮುದ್ದೆ ಮಾಲು 1ನ್ನೇ ಪೊಲೀಸರು ಆ ದಿನ ಜಪ್ತುಪಡಿಸಿಕೊಂಡರು. ಸಾಕ್ಷಿಯು ನಿಪಿ 2 ರ ಮೇಲಿರುವ ತಮ್ಮ ಸಹಿಯನ್ನು ನೋಡಿ ಗುರುತಿಸಿದ್ದು, ಸಾಕ್ಷಿಯು ಸಹಿಯನ್ನು ನಿಪಿ 2(ಸಿ) ಎಂದು ಗುರುತಿಸಲಾಯಿತು. ಸಾಕ್ಷಿಯು ನಿಪಿ 3 ಮತ್ತು 4 ರಲ್ಲಿ ತಮ್ಮ ಇರುವಿಕೆಯನ್ನು ನೋಡಿ ಗುರುತಿಸಿರುತ್ತಾರೆ.

   (ಈ ಹಂತದಲ್ಲಿ ಸಾಕ್ಷಿಯು ಪಂಚನಾಮೆಗೆ ಭಾಗಶಃ ವ್ಯತಿರಿಕ್ತವಾಗಿ ಸಾಕ್ಷಿ ನುಡಿದಿದ್ದರಿಂದ ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿ ಅಂತಾ ಪರಿಗಣಿಸಿ ಪಾಟೀ ಸವಾಲು ಮಾಡಲು ಮಾನ್ಯ ಸ.ಸ.ಅ. ರವರು ಕೋರಿಕೊಂಡಿರುತ್ತಾರೆ. ಕಡತಗಳನ್ನು ಪರಿಶೀಲಿಸಿ ಆಲಿಸಿ ಅನುಮತಿಯನ್ನು ನೀಡಲಾಯಿತು.)

ಪಾಟೀ ಸವಾಲುಃ- ಸ.ಸ.ಅ. ರವರಿಂದಃ-

1. ಪಂಚನಾಮೆಯನ್ನು ಚಾಸ 1 ರವರ ಜಮೀನಿನ ಹಳ್ಳದ ಮೇಲ್ಭಾಗದಲ್ಲಿ ಬೆಳಿಗ್ಗೆ 11.30 ರಿಂದ 12.30 ರವರೆಗೆ ಜರುಗಿಸಿದರು ಎಂದರೆ ಸರಿ. ಸ್ಥಳದಲ್ಲಿ ಚಾಸ 8 ಇದ್ದರು ಎಂದರೆ ಸರಿ.

ಪಾಟೀ ಸವಾಲುಃ ಆರೋಪಿತರ ಪರ ಶ್ರೀ ಆರ್.ಹೆಚ್.ಬಿ. ವಕೀಲರಿಂದಃ

1. ನಾನು ಮತ್ತು ಚಾಸ 1 ಅಕ್ಕಪಕ್ಕದ ಜಮೀನಿನವರಾಗಿದ್ದು ಬಹಳ ವಿಶ್ವಾಸದಿಂದ ಇರುತ್ತೇವೆ ಎಂದರೆ ಸರಿ. ಚಾಸ 1 ನಮ್ಮ ಜಮೀನಿನ ಮೇಲೆ ಗಮನ ವಹಿಸುತ್ತಾರೆ. ತೋಟದಲ್ಲಿ ಏನಾದರೂ ತೊಂದರೆ ಇದ್ದರೆ ನನಗೆ ಬಂದು ತಿಳಿಸುತ್ತಿದ್ದರು. ಮುದ್ದೆ ಮಾಲು 1 ಕಾಡು ಜಾತಿಯ ಮರ ಅಲ್ಲ ಎಂದರೆ ನನಗೆ ಗೊತ್ತಿಲ್ಲ. ದೊಣ್ಣೆಯನ್ನು ಪೊಲೀಸರಿಗೆ ನಾನು ನೀಡಿರುವುದಿಲ್ಲ. ಮುದ್ದೆ ಮಾಲು 1 ರ ಮೇಲೆ ಪೊಲೀಸರು ನನ್ನ ಸಹಿಯನ್ನು ಪಡೆದಿರುವುದಿಲ್ಲ. ಪೊಲೀಸರು ನಾನು ಹೇಳಿದ ಸರ್ವೇ ಸಂಖ್ಯೆಯನ್ನು ಬರೆದುಕೊಂಡರೋ ಇಲ್ಲವೋ ನನಗೆ ಗೊತ್ತಿಲ್ಲ. ಪೊಲೀಸರು ನಾನು ಹೇಳಿದಂತೆ ಬರೆದುಕೊಂಡಿರುವುದಿಲ್ಲ. ಪೊಲೀಸರ ಕೋರಿಕೆಯ ಮೇರೆಗೆ ನಾನು ಪಂಚನಾಮೆಗೆ ಸಹಿ ಮಾಡಿರುತ್ತೇನೆ ಎಂದರೆ ಸರಿ. ಆ ದಿನ 3 ಜನ ಪೊಲೀಸರು ಸ್ಥಳಕ್ಕೆ 2 ಬೈಕಿನಲ್ಲಿ ಬಂದಿದ್ದರು. ಪೊಲೀಸರು ಬೈಕಿನಲ್ಲಿ ಮಂಕಳಲೆ ಗ್ರಾಮದ ರಸ್ತೆಯ ಮೇಲೆಯೇ ಬಂದರು. ಚಾಸ 8 ಎಲ್ಲಿ ಪೊಲೀಸರಿಗೆ ಸಿಕ್ಕರು ಎಂದು ನನಗೆ ಗೊತ್ತಿಲ್ಲ. ಪೊಲೀಸರು ಮಂಕಳಲೆ ಗ್ರಾಮದಲ್ಲಿ ಯಾವುದೇ ನೋಟೀಸನ್ನು ನೀಡಿರುವುದಿಲ್ಲ.

2. 1 ನೇ ಆರೋಪಿಗೆ ಅಡಿಕೆ ತೋಟವು ಮಂಕಳಲೆ ಗ್ರಾಮದ ಸರ್ವೇ ಸಂಖ್ಯೆ 64 ರಲ್ಲಿ ಬರುತ್ತದೆ ಎಂದರೆ ಸರಿಯಲ್ಲ. 1 ನೇ ಆರೋಪಿ ಬಲಾತ್ಕಾರದಿಂದ ಅಡಿಕೆ ಗಿಡಗಳನ್ನು ನೆಟ್ಟಿರುತ್ತಾನೆ. ಈ ದಿನ ಚಾಸ 3 ನನ್ನನ್ನು ಕರೆದುಕೊಂಡು ಬಂದಿರುತ್ತಾರೆ ಎಂದರೆ ಸರಿಯಲ್ಲ. ಚಾಸ 3 ಈ ದಿನ ಬಂದಿದ್ದಾರೋ ಇಲ್ಲವೋ ನನಗೆ ಗೊತ್ತಿಲ್ಲ. ನಾನು ಬಿ.ಎ. ಪದವೀಧರ. ನಾನು ಮತ್ತು ಚಾಸ 3 ವಿಶ್ವಾಸದಿಂದ ಇರುವ ಕಾರಣ ಅವರ ಪರವಾಗಿ ಸಾಕ್ಷ್ಯ ಹೇಳಲು ಬಂದಿರುತ್ತೇನೆ ಎಂದರೆ ಸರಿಯಲ್ಲ. ನಾನು ನನ್ನ ಸಾಕ್ಷ್ಯ ಮುಖ್ಯ ವಿಚಾರಣೆಯಲ್ಲಿ ಹೇಳಿರುವ ವಿಷಯಗಳು ಸುಳ್ಳಿನಿಂದ ಕೂಡಿರುತ್ತವೆ ಎಂದರೆ ಸರಿಯಲ್ಲ.

ಮರು ವಿಚಾರಣೆಃ ಇಲ್ಲ

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ರೀತ್ಯಾ ಗಣಕೀಕರಿಸಲಾಯ್ತು)**

**ಓದಿ ಹೇಳಿ ಕೇಳಿ ಸರಿ ಇದೆ**

1 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ., ಸಾಗರ.